By post 1/4/2014

# ಕರ್ನಾಟಕ ಸರ್ಕಾರ

## (ವಾಣಿಜ್ಯ ತೆರಿಗೆ ಇಲಾಖೆ)

**ವಾಣಿಜ್ಯ ತೆರಿಗೆ ಅಧಿಕಾರಿ ತನಿಖಾ ಠಾಣೆ (ಹೊರ) ನಿಪ್ಪಾಣಿ. ಪೊಸ್ಟ: ಯಮಗರಣಿ, ಜಿಲ್ಲೆ: ಬೆಳಗಾವಿ.**

ಸಂ:ವಾತೆಅ/ತಠಾ/ನಿ/ಹೊರ/ಕೆ–187/2013–14/ಬಿ– 149 ದಿನಾಂಕ: 28–03–2014

**ಅಧಿಸೂಚನೆ**

ವಿಷಯ: ಈ ಕಚೇರಿಯ ಸುಪರ್ದಿಯಲ್ಲಿರುವ ಟ್ರಾನ್ಸಫಾರ್ಮರಗಳನ್ನು ಬಹಿರಂಗ ಹರಾಜು ಮಾಡುವ ಕುರಿತು.

ಉಲ್ಲೇಖ:–1) ಈ ಕಚೇರಿಯ ಆದೇಶ ಸಂಖ್ಯೆ–ಕ.ಮೌ.ತೆ. ಅಧಿನಿಯಮ–2003 ರ ಕಲಂ 53 (12) ರನ್ವಯ ಆದೇಶ ದಿನಾಂಕ: 10–01–2014.

2) ಈ ಕಚೇರಿಯ ಹರಾಜು ನೋಟಿಸ್ ದಿನಾಂಕ: 22–02–2014

***********

ವಾಣಿಜ್ಯ ತೆರಿಗೆ ಅಧಿಕಾರಿ ತನಿಖಾ ಠಾಣೆ (ಹೊರ) ನಿಪ್ಪಾಣಿ ಇವರ ಕಚೇರಿಯ ಟೆಕ್ನೋ ಪಾವರ್ ಕಾರ್ಪೋರೇಶನ್ ಲಿ. ಪೀಣ್ಯ, ಬೆಂಗಳೂರು (29030677686) ಪ್ರಕರಣದಲ್ಲಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆ 2003ರ ಪ್ರಕರಣ 53(12)ರ ಅಡಿಯಲ್ಲಿ ರೂ. 2,47,950–00 ದಂಡ ಪಾವತಿಸಲು ಆದೇಶಿಸಲಾಗಿತ್ತು. ಆದರೆ ದಂಡ ಪಾವತಿಸುವಲ್ಲಿ ವಿಫಲವಾದ್ದರಿಂದ ಈ ಕೆಳಗೆ ವಿವರಿಸಿದ ಸರಕುಗಳನ್ನು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ವಿಲೇವಾರಿ ಮಾಡಲು ಉದ್ದೇಶಿಸಲಾಗಿದೆ. ಸದರಿ ಸರಕುಗಳನ್ನು ದಿನಾಂಕ 25–04–2014 ರಂದು ಮಧ್ಯಾಹ್ನ 12–00 ಘಂಟೆಗೆ ಈ ಕಚೇರಿಯ ಆವರಣದಲ್ಲಿ ಸಾರ್ವಜನಿಕ ಸಮಕ್ಷಮ ಬಹಿರಂಗ ಹರಾಜು ಮಾಡಲು ನಿಗದಿಪಡಿಸಲಾಗಿದೆ. ಆದ್ದರಿಂದ ಇಚ್ಚೆಯುಳ್ಳವರು ಸದರಿ ಹರಾಜಿನಲ್ಲಿ ಭಾಗವಹಿಸಿ, ಸರಕುಗಳನ್ನು ಖರೀದಿಸಬಹುದಾಗಿರುತ್ತದೆ.

**ಹರಾಜಿನ ಸರಕುಗಳ ವಿವರ**

| ಅ.ನಂ | ಸರಕುಗಳ ಹೆಸರು | ವಿವರ |
|---|---|---|
| 1 | 2 | 3 |
| 1 | ಟ್ರಾನ್ಸಫಾರ್ಮರಗಳು | 63 ಕೆವಿಎ 11 ಕೆವಿ/433 ವ್ಹೊ 50 ಹೆಚ್‌ರ್ಝುಡ್ ಕ್ಲಾಸ್, 3ಫೇಸ್ ಆಯಿಲ ಫಿಲ್ಲಡ ಅಲ್ಲುಮಿನಿಯಂ ವ್ಹೊಂಡ್ ಬೀ 3 ಸ್ಟಾರ ರೆಟೆಂಗ ಡಿಸ್ಟ್ರಿಬ್ಯೂಶನ ಟ್ರಾನ್ಸಫಾರ್ಮರ (01) |
| 2 | ಟ್ರಾನ್ಸಫಾರ್ಮರಗಳು | 100 ಕೆವಿಎ 11 ಕೆವಿ/433 ವ್ಹೊ 50 ಹೆಚ್‌ರ್ಝುಡ್ ಕ್ಲಾಸ್, 3ಫೇಸ್ ಆಯಿಲ ಫಿಲ್ಲಡ ಅಲ್ಲುಮಿನಿಯಂ ವ್ಹೊಂಡ್ ಬೀ 3 ಸ್ಟಾರ ರೆಟೆಂಗ ಡಿಸ್ಟ್ರಿಬ್ಯೂಶನ ಟ್ರಾನ್ಸಫಾರ್ಮರ (05) |

ಈ ಮೇಲ್ಕಂಡ ಸರಕುಗಳ ಬಹಿರಂಗ ಹರಾಜಿನಲ್ಲಿ ಬಾಗವಹಿಸುವ ಬಿಡದಾರರು ಈ ಕೆಳಗೆ ಸೂಚಿಸಿರುವ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟಿರಬೇಕಾಗಿರುತ್ತದೆ.

## ಬಹಿರಂಗ ಹರಾಜಿನ ಷರತ್ತು ಮತ್ತು ನಿಬಂಧನೆಗಳು

1) ಪ್ರತಿಯೊಬ್ಬ ಬಿಡದಾರರು ಸರಕುಗಳ ಹರಾಜಿನಲ್ಲಿ ಭಾಗವಹಿಸಲು, ಭದ್ರತಾ ಠೇವಣಿ ರೂ.10,000–00 (ರೂ.ಹತ್ತು ಸಾವಿರ ರೂಪಾಯಿಗಳು) ಡಿ.ಡಿ ರೂಪದಲ್ಲಿ ಅಥವಾ ನಗದು ರೂಪದಲ್ಲಿ ಬಹಿರಂಗ ಹರಾಜು ನಡೆಯುವ ಸ್ಥಳದಲ್ಲಿ 10–30 ಗಂಟೆಯಿಂದ 12–00 ಗಂಟೆಯೊಳಗೆ ಪಾವತಿಸಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು. 12–00 ಗಂಟೆಯ ನಂತರ ಬಂದ ಬಿಡದಾರರ ಹೆಸರುಗಳನ್ನು ಬಹಿರಂಗ ಹರಾಜಿಗೆ ಪರಿಗಣಿಸುವುದಿಲ್ಲ. ಠೇವಣಿ ಹಣಕ್ಕೆ ಬಡ್ಡಿಯನ್ನು ಕೊಡಲಾಗುವುದಿಲ್ಲ.

2) ಬಹಿರಂಗ ಹರಾಜಿಗಿಟ್ಟಿರುವ ಮೇಲೆ ಹೇಳಿದ ಸರಕುಗಳಿಗೆ ನಿಗದಿ ಪಡಿಸಿರುವ ಕನಿಷ್ಠ ಬೆಲೆ ರೂ.5,70,000/–. ಬಹಿರಂಗ ಹರಾಜಿನಲ್ಲಿ ಅತಿ ಹೆಚ್ಚಿನ ಬೆಲೆಯನ್ನು ದಾಖಲು ಮಾಡಿದ ಬಿಡದಾರನ್ನು ಯಶ್ವಸಿ ಖರೀದಿದಾರರೆಂದು ಪರಿಗಣಿಸಲಾಗುವುದು.

3) ಯಶ್ವಸಿಯಾದ ಬಿಡದಾರರು ಸರಕುಗಳ ಒಟ್ಟು ಬೆಲೆಯ ಶೇ.50 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಬೇಕು .ಉಳಿದ ಶೇ.50 ರಷ್ಟು ಹಣವನ್ನು ನಂತಂದ 24 ಗಂಟೆಗಳೊಳಗಾಗಿ ಪಾವತಿಸುವುದು. ತಪ್ಪಿದಲ್ಲಿ ಮುಂಗಡವಾಗಿ ಕಟ್ಟಿದ ಶೇ.50 ರಷ್ಟು ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೇ ಸರಕುಗಳನ್ನು ಮರು ಹರಾಜಿನಲ್ಲಿ ಮಾರಾಟ ಮಾಡಲಾಗುವುದು.

4) ಹರಾಜಿನಲ್ಲಿ ಭಾಗವಹಿಸಿದ ಬಿಡದಾರರು ಹರಾಜು ಮುಗಿದ ನಂತರ ಹರಾಜಿನಲ್ಲಿ ಯಶ್ವಸಿಯಾದವರು ಮತ್ತು ಯಶ್ವಸಿಯಾಗದವರು ಸರ್ಕಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಯಶ್ವಸಿಯಾಗದ ಬಿಡದಾರರಿಗೆ ಭದ್ರತಾ ಠೇವಣಿಯನ್ನು ಸ್ಥಳದಲ್ಲಿ ಹಿಂತಿರುಗಿಸಲಾಗುವುದು.

5) ಹರಾಜನ್ನು ಅಂಗೀಕರಿಸುವ/ರದ್ದುಪಡಿಸುವ/ತಿರಸ್ಕರಿಸುವ/ಮುಂದೂಡುವ ಅಧಿಕಾರವನ್ನು ವಾಣಿಜ್ಯ ತೆರಿಗೆ ಅಧಿಕಾರಿ ತನಿಖಾ ಠಾಣೆ (ಹೊರ) ನಿಪ್ಪಾಣಿ ಇವರು ಹೊಂದಿರುತ್ತಾರೆ. ಇವರ ತೀರ್ಮಾನವೇ ಅಂತಿಮವಾದದ್ದು.

6) ಹರಾಜು ಮಾಡಲಿರುವ ಸರಕುಗಳನ್ನು ಕಚೇರಿ ಆವರಣದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ. ಇಚ್ಚೆಯುಳ್ಳವರು ಕಚೇರಿ ವೇಳೆಯಲ್ಲಿ ಪರಿಶೀಲನೆ ಮಾಡಿ, ಹರಾಜಿನಲ್ಲಿ ಭಾಗವಹಿಸಬಹುದು

ವಾಣಿಜ್ಯ ತೆರಿಗೆ ಅಧಿಕಾರಿ (2)
ತನಿಖಾ ಠಾಣೆ (ಹೊರ), ನಿಪ್ಪಾಣಿ

ಪ್ರತಿಗಳು:

1) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
2) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾರಿ) ಉತ್ತರ ವಲಯ, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ, ಅಧಿಸೂಚನೆಯನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.
3) ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ಮೌಲ್ಯವರ್ಧಿತ ತೆರಿಗೆ ವಿಭಾಗ, ಬೆಳಗಾವಿ ಇವರಿಗೆ ಗೌರವಪೂರ್ವಕವಾಗಿ, ಅಧಿಸೂಚನೆಯನ್ನು ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.
4) ಕಚೇರಿಯ ಪ್ರತಿ.
5) ವಾಣಿಜ್ಯ ತೆರಿಗೆ ಉಪ ಆಯುಕ್ತರು ಇ–ಆಡಳಿತ ವಾಣಿಜ್ಯ ತೆರಿಗೆ ಆಯುಕ್ತರ ಕಚೇರಿ, ಬೆಂಗಳೂರುರವರಿಗೆ ಗೌರವಪೂರ್ವಕವಾಗಿ ಇಲಾಖೆಯ ಅಂತರ್ಜಾಲ ತಾಣ ctax.kar.nic.in ಮತ್ತು E-Notice Board ಎರಡರಲ್ಲಿಯೂ ಪ್ರಕಟಿಸಲು ಕೋರಿದೆ.
6) ತಹಶೀಲ್ದಾರರು, ಚಿಕ್ಕೋಡಿ ಇವರಿಗೆ ಮಾಹಿತಿಗಾಗಿ ಅಭಿನಂದನೆಗಳೊಂದಿಗೆ ಕಳುಹಿಸಲಾಗಿದೆ.